ಮುಂತಾದ ಸಸಿಗಳನ್ನು ನೆಡಲಾಗಿದೆ

ಇ) ಇದಕ್ಕಾಗಿ ಖರ್ಚಾದ ಹಣದ ವಿವರ ಕಳೆದ ೩ ವರ್ಷಗಳದ್ದು ಕೆಳಗಿನಂತಿದೆ

೧೯೮೯-೯೦ ರೂ. ೨೯,೬೩೬-೦೦

೧೯೯೦-೯೧ ರೂ. ೨೪,೪೭,೫೧೭-೦೦

೧೯೯೧-೯೨ ರೂ. ೭,೧೨,೨೧೩-೦೦

ಈ) ಈ ಸಸಿಗಳ ಪೈಕಿ ಶೇ. ೭೫ರಿಂದ ೮೦ ಸಸಿಗಳು ಉಳಿದುಕೊಂಡಿವೆ.

ಉ) ೧೯೯೧-೯೨ನೇ ಸಾಲಿನಲ್ಲಿ ಇದಕ್ಕಾಗಿ ಬಿಡುಗಡೆ ಮಾಡಲಾದ ಹಣ ರೂ. ೧೩,೨೦,೯೮೩ ಆಗಿರುತ್ತದೆ.

ಹೆಸರಘಟ್ಟದಲ್ಲಿರುವ ಮೀನು ಸಂಶೋಧನಾ ಇಲಾಖೆಯಲ್ಲಿರುವ ದಿನಗೂಲಿ ನೌಕರರು

೧೨೯೭(೧೫೩೮)ಶ್ರೀ ಆಂಜನ ಮೂರ್ತಿ (ಸೆಲಮಂಗಲ):- ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಹೆಸರಘಟ್ಟದಲ್ಲಿರುವ ಮೀನು ಸಂಶೋಧನಾ ಇಲಾಖೆಯಲ್ಲಿ ಎಷ್ಟು ಜನ ದಿನಗೂಲಿ ನೌಕರರು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರು) ಕೆಲಸ ಮಾಡುತ್ತಿದ್ದಾರೆ;

ಆ) ಅವರುಗಳು ಸುಮಾರು ೮-೧೦ ವರ್ಷಗಳಿಂದ ದಿನಕೂಲಿ ನೌಕರರಾಗಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅವರು ಸುಮಾರು ಬಾಕಿ ಅರ್ಜಿ ಕೊಟ್ಟು ಅವರ ಕೆಲಸಗಳನ್ನು ನ್ಯಾಯಾಲಯದ ಆದೇಶದಂತೆ ಖಾಯಂಗೊಳಿಸಲು ಕೋರಿದ್ದರೂ ಕೂಡ, ಅವರ ಕೆಲಸವನ್ನು ಖಾಯಂ ಮಾಡದೇ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕಾನೂನಿನ ಪ್ರಕಾರ ಮೇಲ್ಕಂಡ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ದಿನಗೂಲಿ ನೌಕರರ ಕೆಲಸ ಖಾಯಂಗೊಳಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು):-

ಅ) ಒಬ್ಬರು

ಆ) ಹೌದು

ಇ) ಇವರುಗಳ ಸೇವೆಯನ್ನು ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಖಾಯಂ ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ರಾಜ್ಯದ ಪಟೇಲರುಗಳಿಗೆ ಗೌರವ ಧನ

೧೩೦೩(೧೯೨೫)ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):- ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ:-

ಅ) ರಾಜ್ಯದ ಪಟೇಲರುಗಳಿಗೆ ಸಿಗುತ್ತಿರುವ ಗೌರವ ಧನ ಬಹಳ ಕಡಿಮೆ ಎಂಬುದು ಸರ್ಕಾರದ ಗಮನದಲ್ಲಿದೆಯೆ;

ಆ) ಹಾಗಿದ್ದಲ್ಲಿ ಅದನ್ನು ಜಾಸ್ತಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ, ಇದ್ದರೆ ಯಾವಾಗ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ಭೂಮಿ ಮತ್ತು ಕಟ್ಟಡ

೧೩೦೪(೧೬೪೫)ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ) ಬೆಂಗಳೂರು ನಗರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ಭೂಮಿ ಹಾಗೂ ಕಟ್ಟಡಗಳನ್ನು ಖಾಸಗಿಯವರಿಗೆ ಗುತ್ತಿಗೆಗೆ ನೀಡಲಾಗಿದೆಯೇ;

ಆ) ಭೂಮಿ ಹಾಗೂ ಕಟ್ಟಡಗಳಿಂದ ಇಲಾಖೆಗೆ ಬರುತ್ತಿರುವ ಆದಾಯವೇನು (ಪ್ರತಿ ಗುತ್ತಿಗೆಯ ಪ್ರತ್ಯೇಕ ವಿವರಗಳನ್ನು ನೀಡುವುದು);

ಇ) ಮೇಲ್ಕಂಡ ಸ್ಥಳಗಳನ್ನು ಸರ್ಕಾರೀ ಇಲಾಖೆಗಳ ಕಛೇರಿಗಳಿಗಾಗಿ ಏಕೆ ನೀಡಬಾರದು?

ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):-

ಅ) ಹೌದು

ಆ) ಭೂಮಿ ಕಟ್ಟಡಗಳಿಂದ ಇಲಾಖೆಗೆ ಆದಾಯ ಬರುವುದಿಲ್ಲ. ಗುತ್ತಿಗೆಯಿಂದ ಬರುವ ಆದಾಯ ಸಂಬಂಧಪಟ್ಟ ಸಂಸ್ಥೆಗಳಿಗೆ ಜಮೆಯಾಗುತ್ತಿದೆ (ಪಟ್ಟಿ ಲಗತ್ತಿಸಿದೆ).

ಇ) ಸ್ಥಳಗಳನ್ನು ಗುತ್ತಿಗೆಗೆ ನೀಡಲು ಕೋರಿ ಸರ್ಕಾರೀ ಇಲಾಖೆಗಳಿಂದ ಯಾವುದೇ ಮನವಿ ಬಂದಿರುವುದಿಲ್ಲ. ಮನವಿಗಳು ಬಂದಲ್ಲಿ ಅವುಗಳನ್ನುಪರಿಶೀಲಿಸಲಾಗುವುದು.